# <u>ಪತ್ರಿಕಾ ಪ್ರಕಟಣೆ</u>

## ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಪಿ ರವಿ ಕುಮಾರ್ ರವರು ದಿನಾಂಕ ೨೨.೧೨.೨೦೨೧ ರಂದು ಭಾರತೀಯ ತಂತ್ರಜ್ಞಾನ ಸಂಸ್ಥೆ ಧಾರವಾಡಕ್ಕೆ (ಐ.ಐ.ಟಿ. ಧಾರವಾಡ) ಭೇಟಿ.

ಡಿಸೆಂಬರ್ ೨೨, ೨೦೨೧ ರಂದು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀಯುತ. ಪಿ. ರವಿ ಕುಮಾರ್ ರವರು, ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀ ನಿತೇಶ್ ಪಾಟೀಲ್ ಅವರೊಡನೆ ಐ.ಐ.ಟಿ. ಧಾರವಾಡಕ್ಕೆ ಭೇಟಿ ನೀಡಿದ್ದರು. ಐಐಟಿ ಧಾರವಾಡದ ನಿರ್ದೇಶಕರಾದ ಪ್ರೊ. ಪಿ ಶೇಷು ಶ್ರೀಯುತರೊಂದಿಗೆ ಚರ್ಚೆ ನಡೆಸಿ, ಸಂಸ್ಥೆಯ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ವಿವರಿಸಿದರು.




ಶ್ರೀಯುತ ಪಿ. ರವಿ ಕುಮಾರ್ ಅವರು ಹೈ ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ (ಅನಂತ ಗಣಕ) ಸೌಲಭ್ಯವನ್ನು ಉದ್ಘಾಟಿಸಿದರು. ನಂತರ ಶ್ರೀಯುತರು ಬಾಹ್ಯಾಕಾಶ ದತ್ತಾಂಶ ವಿಜ್ಞಾನ ಪ್ರಯೋಗಾಲಯ ಮತ್ತು ಅತ್ಯಾಧುನಿಕ ಕೇಂದ್ರೀಯ ಇನ್ಸ್ ಟ್ರುಮೆಂಟೇಷನ್ ಸೌಲಭ್ಯ (SCIF) ಕ್ಕೆ ಭೇಟಿ ನೀಡಿ ಪ್ರಾಧ್ಯಾಪಕರೊಂದಿಗೆ ಸಂವಾದ ನಡೆಸಿದರು.



ಶ್ರೀ ಪಿ. ರವಿ ಕುಮಾರ್ ಅವರು ತದನಂತರ, ನಿರ್ಮಾಣ ಹಂತದಲ್ಲಿರುವ ಖಾಯಂ ಕ್ಯಾಂಪಸ್‌ಗೆ ತೆರಳಿದಾಗ ಪ್ರೊ. ನಾಗೇಶ್ ಅಯ್ಯರ್ ಡೀನ್ (ಐಪಿಎಸ್) ರವರು, ಕಾಮಗಾರಿಯಬಗ್ಗೆ ವಿವರವಾಗಿ ತಿಳಿಸಿದರು. ಶ್ರೀಯುತರು ಐಐಟಿ ಧಾರವಾಡಕ್ಕೆ ರಾಜ್ಯ ಸರ್ಕಾರದಿಂದ ಒದಗಿಸಬೇಕಾದ ಮೂಲ ಸೌಕರ್ಯಗಳಾದ ವಿದ್ಯುತ್, ನೀರು, ಹೈ ಟೆನ್ಷನ್ ಲೈನ್ ಅನ್ನು ಸ್ಥಳಾಂತರಿಸುವುದು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಬೇಕಾದ ಅಗತ್ಯ ನೆರವು ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು

ಶ್ರೀ. ಪಿ. ರವಿ ಕುಮಾರ್ ರವರು ಐ.ಐ.ಟಿ. ಧಾರವಾಡದ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳನ್ನು ಶ್ಲಾಘಿಸಿದರು. ಐಐಟಿ ಧಾರವಾಡದ ಖಾಯಂ ಕ್ಯಾಂಪಸ್‌ನಲ್ಲಿ ನಿರ್ಮಾಣ ಚಟುವಟಿಕೆಗಳು ಅತ್ಯುತ್ತಮವಾಗಿ ನಡೆಯುತ್ತಿವೆ ಎಂದು ಅವರು ಪ್ರಸಂಶಿದರು.